# ಯಕ್ಷಗಾನ ಸಮಗ್ರ ದಾಖಲೀಕರಣ ಅಗತ್ಯ

## ಯಕ್ಷೋತ್ಸವ ಕಾರ್ಯಕ್ರಮ; ಅರ್ಥಧಾರಿ ಅಶೋಕ ಭಟ್ ಉಜಿರೆ ಅಭಿಮತ

ಪ್ರಜಾವಾಣಿ ವಾರ್ತೆ

ಶಿರಸಿ: ಯಕ್ಷಕಲೆಯ ಸಮಗ್ರ ದಾಖಲೀಕರಣ ವರ್ತಮಾನದ ಯಕ್ಷಕಲೆಯ ಅಗತ್ಯತೆಯಾಗಿದೆ ಎಂದು ಅರ್ಥಧಾರಿ ಅಶೋಕ ಭಟ್ ಉಜಿರೆ ಹೇಳಿದರು.

ಸ್ವರ್ಣವಲ್ಲೀ ಸಂಸ್ಥಾನದ ಅಂಗಸಂಸ್ಥೆಯಾದ ಯಕ್ಷಶಾಲ್ಮಲಾ ಸಂಘಟನೆ ಮಠದಲ್ಲಿ ಆಯೋಜಿಸಿರುವ ಎರಡು ದಿನಗಳ ಯಕ್ಷೋತ್ಸವ ಉದ್ಘಾಟನೆಯಲ್ಲಿ ಶನಿವಾರ ಮಾತನಾಡಿದರು.

ಪುರಾಣದಲ್ಲಿನ ಜೀವನ ಮೌಲ್ಯ, ಸಮಗ್ರ ದರ್ಶನವನ್ನು ಕಲೆಯ ಮೂಲಕ ಜನಾಂಗಕ್ಕೆ ಅರಿವು ನೀಡುವುದು ಯಕ್ಷಕಲೆಯ ಸಾಮರ್ಥ್ಯ. ಯಕ್ಷಗಾನ ಕಲೆ ಪ್ರಾಪಂಚಿಕವಾಗಿ ಶ್ರೀಮಂತ ಹಾಗೂ ದೀರ್ಘ ಅವಧಿಯ ಕಲೆಯಾಗಿದೆ. ಆದರೆ ಇಂದು ಯಕ್ಷಕಲೆಗೆ ರಾಜಾಶ್ರಯವಿಲ್ಲ. ಯಕ್ಷಗಾನ ಅಕಾಡೆಮಿ ನಂಬಿ ಯಕ್ಷಕಲೆ ಬದುಕಿಲ್ಲ, ಬೆಳೆದಿಲ್ಲ. ಆದರೆ ಯಕ್ಷ ಶಾಲ್ಮಲಾ ಸಂಘಟನೆಯು ಕಲೆಯ ಸ್ವರೂಪ, ಸಾಹಿತ್ಯದ ಸಂಬಂಧ ಶಾಶ್ವತ ಕೆಲಸ ಮಾಡಿದೆ. ಇದು ಸರ್ಕಾರ ಮಟ್ಟದಲ್ಲಿ ದಾಖಲೀಕರಣದ ಕಾರ್ಯ ಆಗಬೇಕಿದೆ ಎಂದರು.

ಕಾಲದ ಜತೆ ಕಲೆ ಸಾಗಿದರೂ ಕಲೆಯ ಸ್ವರೂಪ, ಸ್ವಭಾವ ಹಾಗೂ ಮೂಲ ಚರ್ಯೆಯನ್ನು ಹಾಗೆಯೇ ಇಟ್ಟುಕೊಳ್ಳುವ ಕೆಲಸ ಆಗಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಂಗವಾಗಿ ಯಕ್ಷಋಷಿ ಹೊಸ್ತೋಟ ಮಂಜುನಾಥ ಭಾಗವತ ಪ್ರಶಸ್ತಿಯನ್ನು ಸ್ವಾಮೀಜಿ ಅವರಿಂದ ಸ್ವೀಕರಿಸಿದ ಹಿರಿಯ ಯಕ್ಷ ಕಲಾವಿದ ಶ್ರೀಪಾದ ಭಟ್ ಥಂಡೀಮನೆ ಮಾತನಾಡಿ, ಯಾವುದೇ ಕಲೆ ಬೆಳೆಯಲು ಬದಲಾವಣೆ ಅಗತ್ಯ. ಆದರೆ ಆ ಬದಲಾವಣೆಯು ಕಲೆಯ ಸತ್ವ ಕೊಚ್ಚಿಕೊಂಡು ಹೋಗುವಷ್ಟು ಇರಬಾರದು ಎಂದು ಹೇಳಿದರು.

ಸಾನ್ನಿಧ್ಯ ವಹಿಸಿದ್ದ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ಯಕ್ಷಗಾನವು ಸಂಸ್ಕಾರ ಕೊಡುವ ಕಲೆ. ಆದರೆ ಇತ್ತೀಚೆಗೆ ಆಹಾರ ಕ್ರಮ, ವಿವಾಹ ವಿಷಯದಲ್ಲಿ ಸ್ವೇಚ್ಛಾಚಾರ ಹೆಚ್ಚಿದೆ. ಇದರಿಂದ ಸಂಸ್ಕಾರ ಕಡಿಮೆಯಾಗುತ್ತಿದೆ. ಭವಿಷ್ಯದಲ್ಲಿ ಇದರ ನಿಯಂತ್ರಣ ಆಗಬೇಕಿದೆ ಎಂದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ ಐನಕೈ ಉಪಸ್ಥಿತರಿದ್ದರು.

ಯಕ್ಷ ಶಾಲ್ಮಲಾ ಕಾರ್ಯಾಧ್ಯಕ್ಷ ಆರ್.ಎಸ್.ಹೆಗಡೆ ಸ್ವಾಗತಿಸಿದರು. ಕಾರ್ಯದರ್ಶಿ ನಾಗರಾಜ ಜೋಶಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀನಿವಾಸ ಮತ್ತಿಘಟ್ಟ ನಿರೂಪಿಸಿದರು. ಶಂಕರ ಭಟ್ ಉಂಚಳ್ಳಿ ಪ್ರಶಸ್ತಿ ಪತ್ರ ವಾಚಿಸಿದರು. ಜಿ.ಜಿ.ಹೆಗಡೆ ಕನೇನಳ್ಳಿ ವಂದಿಸಿದರು.



ಶಿರಸಿಯ ಸ್ವರ್ಣವಲ್ಲೀ ಮಠದಲ್ಲಿ ಆಯೋಜಿಸಿರುವ ಯಕ್ಷೋತ್ಸವ ಕಾರ್ಯಕ್ರಮದಲ್ಲಿ ಅಂಗವಾಗಿ ಯಕ್ಷಋಷಿ ಹೊಸ್ತೋಟ ಮಂಜುನಾಥ ಭಾಗವತ ಪ್ರಶಸ್ತಿಯನ್ನು ಯಕ್ಷ ಕಲಾವಿದ ಶ್ರೀಪಾದ ಭಟ್ ಥಂಡೀಮನೆ ಅವರಿಗೆ ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಪ್ರದಾನ ಮಾಡಿದರು

### ಮುಖ್ಯಾಂಶಗಳು

- ಯಕ್ಷಕಲೆಗೆ ರಾಜಾಶ್ರಯವಿಲ್ಲ
- ಯಕ್ಷಗಾನವು ಸಂಸ್ಕಾರ ಕೊಡುವ ಕಲೆ
- ಆಹಾರ ಕ್ರಮ, ವಿವಾಹ ವಿಷಯದಲ್ಲಿ ಹೆಚ್ಚಿದ ಸ್ವೇಚ್ಛಾಚಾರ